ಬೀದರ್ ಜಿಲ್ಲೆಯ ರೈತರು ಹೊರ ರಾಜ್ಯಕ್ಕೆ ಕಬ್ಬನ್ನು ಸಾಗಿಸುವುದು ಕುರಿತು

847 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ (ಬಸವಕಲ್ಯಾಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೀದರ್ ಜಿಲ್ಲೆಯ ರೈತರು ಕಬ್ಬನ್ನು ಮಹಾರಾಷ್ಟ್ರಕ್ಕೆ ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಈ ರೀತಿ ನಮ್ಮಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳಿದ್ದರೂ ಸಹ ಹೊರ ರಾಜ್ಯಕ್ಕೆ ಕಬ್ಬನ್ನು ಸಾಗಿಸುವುದಕ್ಕೆ ಕಾರಣವೇನು? (ವಿವರವಾದ ವಿವರಣೆ ನೀಡುವುದು)*

ಇ) *ಹೊರ ರಾಜ್ಯಕ್ಕೆ ಕಬ್ಬನ್ನು ಸಾಗಿಸುತ್ತಿರುವುದರಿಂದ ಬೀದರ್‌ನಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಯು ನಷ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ನಷ್ಟವನ್ನು ಸರಿದೂಗಿಸಲು ಸರ್ಕಾರವು ಕೈಗೊಂಡ ಕ್ರಮವೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಹೌದು.

ಆ) ಹೊರ ರಾಜ್ಯಕ್ಕೆ ಕಬ್ಬನ್ನು ಸಾಗಿಸುವುದಕ್ಕೆ ಕಾರಣಗಳು ಈ ಕೆಳಕಂಡಂತೆ ಇರುತ್ತವೆ

1) ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಕಳೆದ ವರ್ಷ ಮಳೆ ಅಭಾವದಿಂದ ಕಬ್ಬಿನ ಕ್ಷೇತ್ರ ಕಡಿಮೆಯಾಗಿ ಗಣನೀಯವಾಗಿ ಕಬ್ಬಿನ ಉತ್ಪನ್ನವೂ ಕಡಿಮೆಯಾಗಿರುತ್ತದೆ. ಇದರಿಂದ ಮಹಾರಾಷ್ಟ್ರ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ತಾವು ಅಗತ್ಯ ಕಬ್ಬು ಪೂರೈಕೆವಾಗಿ ನಮ್ಮ ರಾಜ್ಯದ ಕಡೆ ಗಮನ ಹರಿಸಿವೆ (ಬೀದರ್ ಜಿಲ್ಲೆಯೂ ಸೇರಿ)

2) ಮಹಾರಾಷ್ಟ್ರ ರಾಜ್ಯದ ಸಕ್ಕರೆ ಕಾರ್ಖಾನೆಗಳು ನಮ್ಮ ರಾಜ್ಯದಿಂದ ಪಡೆದ ಕಬ್ಬಿಗೆ ಟನ್ ಒಂದಕ್ಕೆ ರೂ. 400 ಹಸ್ತ ನೀಡುತ್ತಿವೆ.

3) ನೈಸರ್ಗಿಕ ಅಭಾವವಾದ ಮಳೆಯ ಕೊರತೆಯಿಂದ ಬೀದರ್ ಜಿಲ್ಲೆಯ ಭಾವಿಗಳಲ್ಲಿ ನೀರಿನ ಅಭಾವದಿಂದ ಈಗಿರುವ ಕಬ್ಬು ಜನವರಿ ಫೆಬ್ರುವರಿ 93ರ ವರೆಗೆ ಉಳಿಸುವ ಸಾಧ್ಯತೆ ಇರುವುದಿಲ್ಲ ಮತ್ತು ಕಬ್ಬು ಒಣಗಿ ಹೋಗುವುದೆಂಬ ಭಯದಿಂದ ಅಲ್ಲದೆ ಕಾರ್ಖಾನೆಗೆ ಕಬ್ಬು ಸರಬರಾಜಾಗುವ ಪದ್ಧತಿ ಕಬ್ಬು ನಾಟಿ ಮಾಡಿರುವ ದಿನಾಂಕವನ್ನಾಧರಿಸಿರುವುದರಿಂದ ಕಬ್ಬು ಸರಬರಾಜಿಗೆ ತೊಡವಾಗುವುದೆಂದು ಕಬ್ಬು ಹೊರ ಹೋಗಲು ಕಾರಣವಾಗಿರುತ್ತದೆ.

4) ಕಾರ್ಖಾನೆಯು ಕಬ್ಬು ಸರಬರಾಜುದಾರರಾದ ರೈತರ ಕಬ್ಬಿನ ಬಿಲ್ಲುಗಳಿಂದ ಸಹಕಾರಿ ಕ್ಷೇತ್ರದ ಸಾಲಗಳನ್ನು ವಸೂಲಿ ಮಾಡುತ್ತಿರುವುದು ಕೂಡಾ ಕಬ್ಬು ಬೀದರ್ ಜಿಲ್ಲೆಯಿಂದ ಹೊರ ರಾಜ್ಯಕ್ಕೆ ಹೋಗುತ್ತಿರುವುದು ಒಂದು ಮುಖ್ಯ ಕಾರಣವಾಗಿರುತ್ತದೆ.

ಇ) ಸದ್ಯಕ್ಕೆ ಕಾರ್ಖಾನೆಗೆ ದಿನಂಪ್ರತಿ ಬೇಕಾಗುವಷ್ಟು ಕಬ್ಬು ದೊರೆಯುತ್ತಿದೆ. ಈ ಹಂಗಾಮಿನಲ್ಲಿ ಕಾರ್ಖಾನೆಯು ಸುಮಾರು 3.60 ಲಕ್ಷ ಮೆಟ್ರಿಕ್ ಟನ್

ಕಬ್ಬು ಅರೆಯಬೇಕಾಗಿರುತ್ತದೆ. ಮಹಾರಾಷ್ಟ್ರ ರಾಜ್ಯಕ್ಕೆ ಹೋಗುತ್ತಿರುವ ಕಬ್ಬು ಇದೇ ರೀತಿ ಮುಂದುವರೆದಲ್ಲಿ ಕಾರ್ಖಾನೆಗೆ ಫೆಬ್ರುವರಿ ತಿಂಗಳ ನಂತರ ಕಬ್ಬಿನ ಕೊರತೆ ಉಂಟಾಗಬಹುದು. ಒಂದು ವೇಳೆ ಹೀಗೆ ಕೊರತೆ ಉಂಟಾದಲ್ಲಿ ಪೂರ್ಣ ಸಾಮರ್ಥ್ಯ ಬಳಕೆಯಾಗದ ಕಾರಣವೂ ಸಹ ನಷ್ಟ ಉಂಟು ಮಾಡುವುದು. ಆದ್ದುದರಿಂದ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಗೆ ಅಗತ್ಯ ಕಬ್ಬು ಪೂರೈಕೆಯಾಗಬೇಕೆಂಬ ದೃಷ್ಟಿಯಿಂದ ಹೊರಗಡೆ ಹೋಗುವ ಕಬ್ಬನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ.

ಸಹಕಾರ ಇಲಾಖೆ ಅಧ್ಯಕ್ಷರ ವಾರ್ಷಿಕ ಅವಧಿ ವಿಚಾರ.

850 - ಶ್ರೀ ಕೆ. ಶಾಮಣ್ಣ (ಶೃಂಗೇರಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಸಹಕಾರ ಇಲಾಖೆಯ ಕಾಯಿದೆಯ ಪ್ರಕಾರ ವಾರ್ಷಿಕ ಆಡಳಿತ ಮಂಡಳಿಯ ಅಧ್ಯಕ್ಷರ ಅವಧಿಯು ಯಾವಾಗ ಮುಕ್ತಾಯವಾಗುವುದು?*

ಆ) *ಹಾಗಿದ್ದಲ್ಲಿ ಜನರಲ್ ಬಾಡಿಯಿಂದ ಮತ್ತೊಂದು ಜನರಲ್ ಬಾಡಿಯವರೆಗೆ ಅವಧಿ ಎಷ್ಟು?*

ಇ) *ಕೊಪ್ಪ ತಾಲ್ಲೂಕು ಕರೀಮನೆ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರು ಮುಂದುವರಿಯುತ್ತಿರುವುದಕ್ಕೆ ಕಾರಣವೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ಪ್ರಕಾರ ಪ್ರತಿ ವರ್ಷ ಅಧ್ಯಕ್ಷರ ಚುನಾವಣೆ ನಡೆಯಬೇಕಾಗಿರುತ್ತದೆ.

ಆ) ಒಂದು ಸಹಕಾರಿ ವರ್ಷ

ಇ) ದಿನಾಂಕ 29-12-1992ರಂದು ಕರೀಮನೆಯ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ಹೊಸ ಅಧ್ಯಕ್ಷರ ಚುನಾವಣೆ ನಡೆದಿರುತ್ತದೆ.

ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘದಿಂದ ಗೊಬ್ಬರದ ವಿತರಣೆಯಲ್ಲಿ ಅವ್ಯವಹಾರ.

866 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘದವರು ಸಾಲ ಮಂಜೂರಾದ ಸದಸ್ಯರುಗಳಿಗೆ ರಸಗೊಬ್ಬರಗಳನ್ನು ವಿತರಣೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ರಸಗೊಬ್ಬ ವಿತರಣೆಯಲ್ಲಿ ಅವ್ಯವಹಾರ ನಡೆದಿರುವುದು ನಿಜವೆ?*

ಇ) *ಹಾಗಿದ್ದಲ್ಲಿ ಸಂಬಂಧಪಟ್ಟವ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?*

ಈ) *ರಸಗೊಬ್ಬರಗಳನ್ನು ಸಂಘದ ಸದಸ್ಯರುಗಳಿಗೆ ವಿತರಣೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘಗಳ ಪೈಕಿ ಎರಡು ಸಹಕಾರ ಸಂಘಗಳಾದ ಒಳಪಟ್ಟಿ ಮತ್ತು ಆಂದೋಲಾ ಇವುಗಳು